(SRI H. M. CHANNABASAPPA)

been in the House of Legislature for quite a long time. I did put a programme and I am sure the hon. Member concerned must have received the programme. All of a sudden, I fell ill one day, and I thought of cancelling the programme. So, I told my P. A. 'Cancel the programme. I am not well. I do not want to go.' The Member was also informed In the meantime, it was a Public School or College Opening or some such thing-, they got the invitations printed and all that kind of a thing. So, I said: 'Alright, you keep only one day's programme and intimate the programme'. I do not think there is anything wrong in this and there is absolutely no hiding in this. I would like to assure the hon. Members of the House that it shall be our endeavour to take everybody together, to create a greater sense of satisfaction amongst the public at large and do the best possible service, during the course of the five years in which the hon. Members on this side or on that side, will continue as Legislators.

Local Members to accompany the Ministers on Tour.

ಶ್ರೀ ಎನ್. ಹುಚ್ಚಮಾಸ್ತಿಗೌಡ, (ಕಂದಾಯ ಶಾಖೆಯ ಮಂತ್ರಿಗಳು).—ನಾನು ಪ್ರವಾಸ ಕೈಕೊಂಡ ವಿಷಯದ ಬಗ್ಗೆ ಮಾನ್ಯ ಮಾರೇಗೌಡರು ಪ್ರಸ್ತಾಪ ಮಾಡಿದರು. ನಾನು ನೆಲಮಂಗಲದಲ್ಲಿ ಯಾವ ಕಾರ್ಯ ಕ್ರಮವನ್ನು ಸಹ ಇಟ್ಟುಕೊಂಡಿರಲಿಲ್ಲವಾದ್ದರಿಂದ ಮಾನ್ಯ ಸದಸ್ಯರಿಗೆ ಅದನ್ನು ತಿಳಿಸಿರಲಿಲ್ಲ. ನಾನು ಪ್ರವಾಸ ಹೋಗುವಾಗ ದಾರಿಯಲ್ಲಿ ತೋರಣ ಕಟ್ಟಿ ಜನರು ನಿಂತಿದ್ದರು. ಅದಕ್ಕಾಗಿ ಅಲ್ಲಿ ನಾನು ಸ್ವಲ್ಪ ಕಾಲ ನಿಲ್ಲಬೇಕಾಯಿತು. ಜನರು ಒಂದು ಮನವಿಯನ್ನು ಸಲ್ಲಿಸಿದರು. ಅಷ್ಟೇ ಹೊರತು ಅಲ್ಲಿ ಬೇರೆ ಯಾವ ಕಾರ್ಯಕ್ರಮವೂ ಇರಲಿಲ್ಲ ?

ಶ್ರೀ ಎಚ್. ಮಾರೇಗೌಡ.—ಅಲ್ಲಿ ಕಾರ್ಯಕ್ರಮ ಇಲ್ಲದಿದ್ದರೂ ಎರಡು ಗಂಟೆಗಳ ಕಾಲ ತಾವು ಇದ್ದಿರಿ. ಆದರೂ ತಮ್ಮ ಬಗ್ಗೆ ನಾನೇನು ಅಪಾದನೆ ಮಾಡಿಲ್ಲ, ನಾನು ಅಪಾದನೆ ಮಾಡಿದ್ದು ವಿದ್ಯಾ ಮಂತ್ರಿಗಳ ವಿಚಾರದಲ್ಲಿ.

ಶ್ರೀ ಎಚ್. ಡಿ ದೇವೇಗೌಡ —ಇಂದು ಅಸೆಂಬ್ಲಿ ಮುಕ್ತಾಯವಾಗುವುದರಿಂದ ನಾಳೆಯಿಂದ ಮಂತ್ರಿಗಳ ಪ್ರವಾಸ ಪ್ರಾರಂಭವಾಗುತ್ತದೆ. ನಾನು ಈ ಮೊದಲು ಹೆಗ್ಗಡದೇವನಕೋಟೆಯ ವಿಷಯ ವಿತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ, ಯಾವುದಾದರು ಖಾಸಗೀ ಹೈಸ್ಕೂಲಿನವರಾದರೇ, ತಾಲ್ಲೂಕ್ ಬೋರ್ಡಿನ ಹೈಸ್ಕೂಲಿನವರಾದರೆ, ಅದರ ಮೇನೇಜ್‌ಮೆಂಟ್‌ನವರು ಏನಾದರು ಸಮಾರಂಭ ಏರ್ಪಡಿಸಿದರೆ ಅದಕ್ಕೆ ತಮಗೆ ಇಚ್ಛೆ ಬಂದವರನ್ನು ಆಹ್ವಾನ ಮಾಡಬಹುದು. ಆದರೆ ಒಂದು ಜೂನಿಯರ್ ಕಾಲೇಜನ್ನು ಸರ್ಕಾರದವರೇ ಪ್ರಾರಂಭ ಮಾಡುವಾಗ ಅದರ ಒಪನಿಂಗ್ ಸರಿಮನಿಗೆ ವಿದ್ಯಾ ಇಲಾಖೆಯವರು ಸಂಬಂಧಪಟ್ಟ ಎಂ. ಎಲ್. ಎ. ಅವರನ್ನು ಕರೆಯಬೇಕಾಗುತ್ತದೆ. ಆ ರೀತಿ ಸಂಬಂಧಪಟ್ಟ ಎಂ. ಎಲ್. ಎ. ಯನ್ನು ಬಿಟ್ಟು, ಆ ಎಂ. ಎಲ್. ಎ. ಪ್ರತಿಸ್ಪರ್ಧಿಯನ್ನು ಅಂದರೆ ಚುನಾವಣೆಯಲ್ಲಿ ಸೋತವರನ್ನು ಕರೆದರೆ ಅದನ್ನು ಖಂಡನೆ ಮಾಡಬೇಕಾಗುತ್ತದೆ. ಸರ್ಕಾರದ ಮಟ್ಟದಲ್ಲಿ ಯಾವುದಾದರು ಒಂದು ಫಂಕ್ಷನ್ನನ್ನು ಸಂಬಂಧಪಟ್ಟ ಎಂ. ಎಲ್. ಎ. ಅನ್ನು ಬಿಟ್ಟು ಮಾಡುವುದಾದರೆ ಅದನ್ನು ಕಟುವಾಗಿ ಟೀಕೆ ಮಾಡಬೇಕಾಗುತ್ತದೆ. ಅಂತಹ ಒಂದು ಸಂಪ್ರದಾಯವನ್ನು ಬೆಳೆಸುವುದು ಸರಿಯಲ್ಲ ಪ್ರಜಾಪ್ರಭುತ್ವದಲ್ಲಿ ಒಂದು ಒಳ್ಳೆಯ ಆರೋಗ್ಯಕರವಾದ ವಾತಾವರಣವನ್ನು ಬೆಳೆಸಬೇಕಾದರೆ ಚುನಾಯಿತ ಪ್ರತಿನಿಧಿಗಳು ಅವರು ಯಾವುದೇ ಪಕ್ಷದವರಾಗಿರಲಿ, ಅವರಿಗೆ ಸಹಕಾರ ಕೊಡತಕ್ಕದ್ದು ಮತ್ತು ಅವರಿಂದ ಸಹಕಾರ ತೆಗೆದುಕೊಳ್ಳತಕ್ಕದ್ದು ಒಳ್ಳೆಯದು. ಈ ಒಂದು ತತ್ವವನ್ನು ಬೆಳೆಸಿಕೊಂಡು ಹೋಗತಕ್ಕದ್ದು ಮತ್ತು ಸರ್ಕಾರದ ಮಟ್ಟದಲ್ಲಿ ಕಾಲೇಜುಗಳನ್ನು ಪ್ರಾರಂಭಮಾಡುವಾಗ ಅದರ ಒಂದು ಸಮಾರಂಭಕ್ಕೆ ಸಂಬಂಧಪಟ್ಟ ಎಂ ಎಲ್. ಎ. ಯನ್ನು ಕರೆದುಕೊಂಡು ಹೋಗುವುದು ಒಳ್ಳೆಯದು ಎಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಿದ್ದು.

Incident at Tiptur when the Revenue Minister was on Tour.

ಶ್ರೀ ಟಿ. ಎಂ. ಮಂಜುನಾಥ.—ಮಾನ್ಯ ಅಧ್ಯಕ್ಷರೇ, ಹಿರಿಯರಾದಂಥ ಸನ್ಮಾನ್ಯ ಕಂದಾಯ ಮಂತ್ರಿಗಳು ಪ್ರಥಮವಾಗಿ ನಮ್ಮ ತಾಲ್ಲೂಕ್‌ನಲ್ಲಿ ಪ್ರವಾಸ ಮಾಡಿದಾಗ ನಡೆದಂಥ ಘಟನೆಯನ್ನು ಹೇಳಲು ಇಚ್ಛೆಪಡುತ್ತೇನೆ. ವೈಯಕ್ತಿಕವಾಗಿ ಶ್ರೀಮಾನ್ ಹುಚ್ಚಮಾಸ್ತಿಗೌಡರಿಗೂ ನನಗೂ ಯಾವ ತರಹದ ಭಿನ್ನಾಭಿಪ್ರಾಯ ಇಲ್ಲ. ನನಗೆ ಅವರಲ್ಲಿ ಅಭಿಮಾನವಿದೆ. ಮತ್ತು ಅವರು ಹಿರಿಯರು ಎಂಬ ಭಾವನೆ ಇದೆ. ಮಂತ್ರಿಗಳು ನಮಗೆ ಮಾತ್ರ ಮಂತ್ರಿಗಳಲ್ಲದೆ ಇಡೀ ದೇಶಕ್ಕೆ ಮಂತ್ರಿಗಳು ಎಂಬ ಭಾವನೆಯಿಂದ ನಾನು ಚುನಾವಣೆಯಲ್ಲಿ ಆರಿಸಿ ಬಂದಮೇಲೆ ನನ್ನ ಕ್ಷೇತ್ರಕ್ಕೆ ೪-೫ ಜನ ಮಂತ್ರಿಗಳನ್ನು ಆಹ್ವಾನ ಮಾಡಿದ್ದೇನೆ. ಅವರು ತಿಪಟೂರಿಗೆ ಬಂದಾಗ ಭವ್ಯ ಸುಸ್ವಾಗತವನ್ನು ಕೊಟ್ಟಿದ್ದೇವೆ. ತಾ॥ ೨೩ನೇ ಜುಲೈ ೧೯೭೨ರಲ್ಲಿ ಮಾನ್ಯ ಹಿರಿಯರಾದಂಥ ಶ್ರೀಮಾನ್ ಹುಚ್ಚಮಾಸ್ತಿಗೌಡರು ನಮ್ಮ ತಾಲ್ಲೂಕಿನ ಒಂದು ಹಳ್ಳಿಗೆ ವಿದ್ಯುಚ್ಛಕ್ತಿ ಪ್ರಾರಂಭೋತ್ಸವ ಮಾಡಲು ರಾತ್ರಿ ಹತ್ತೂವರೆ ಗಂಟೆಗೆ ಬಂದರು. ಆ ಸಮಾರಂಭ ಮುಗಿದ ಮೇಲೆ ತಿಪಟೂರಿಗೆ ರಾತ್ರಿ ೧೧ ಗಂಟೆಗೆ ಬಂದು ತಮಗೆ ಬೇಕಾದ ಅಧಿಕಾರಿಗಳನ್ನು ಕರೆಸಿ, ಅವರಿಂದ ತಾಲ್ಲೂಕ್ ಅಭಿವೃದ್ಧಿ ಮಂಡಲಿಯ ಚುನಾವಣೆಗೆ ಸಂಬಂಧಪಟ್ಟ ರೆಕಾರ್ಡ್‌ಗಳನ್ನು ತಾಲ್ಲೂಕ್ ಅಭಿವೃದ್ಧಿ ಮಂಡಲಿಯಿಂದ ತರಿಸಿ, ಆ ರೀತಿ ಮಾಡಬೇಕು, ಈ ರೀತಿ ಮಾಡಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದಾರೆಂದು ನನಗೆ ತಿಳಿದುಬಂತು. ಇದು ನಿಜವಾದ ಸಂಗತಿ. ಹಿಂದೆ ಮಾನ್ಯ ಶಿವಪ್ಪನವರು ವಿರೋಧಪಕ್ಷದ ನಾಯಕರಾಗಿದ್ದಾಗಲೂ ಸಹ ಆಗಿನ ಮಂತ್ರಿಗಳನ್ನು ತಮ್ಮ ಕ್ಷೇತ್ರಕ್ಕೆ ಬರಮಾಡಿಕೊಂಡು ಮತ್ತು ಮಂತ್ರಿಗಳು ಕಾರ್ಯಕ್ರಮ ಇಟ್ಟುಕೊಂಡು ಬಂದಾಗಲೆಲ್ಲಾ ಸುಸ್ವಾಗತ ನೀಡಿ ಕಳುಹಿಸಿಕೊಡುತ್ತಿದ್ದರು. ಹಿರಿಯರಾದಂಥ ಶ್ರೀಮಾನ್ ಹುಚ್ಚಮಾಸ್ತಿಗೌಡರು ಈಗಿನ ಮಂತ್ರಿಮಂಡಲ ಅಧಿಕಾರ ವಹಿಸಿಕೊಂಡ ಮೇಲೆ ಕಂದಾಯ ಶಾಖೆಯ ಮಂತ್ರಿಗಳಾದರು. ಇದಕ್ಕೂ ಮೊದಲು ಅವರು ವಿಧಾನಸಭಾ ಸದಸ್ಯರಾಗಿದ್ದುಕೊಂಡು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕೆಲಸ ಮಾಡಿ ಹೆಚ್ಚಿನ ಅನುಭವ ಪಡೆದುಕೊಂಡು ಯಾವ ಯಾವ ಸ್ಥಾನಮಾನಗಳಲ್ಲಿ ಇದ್ದುಕೊಂಡು ವಿಷ್ಪರಮಟ್ಟಿಗೆ ಬೆಲೆ ಕೊಡಬೇಕು ಎಂಬುದನ್ನೆಲ್ಲಾ ಅವರು ತಿಳಿದುಕೊಂಡಿದ್ದಾರೆ. ಈ ರೀತಿ ಅನುಭವ ಪಡೆದೂ ಸಹ ಚುನಾವಣೆಯ ವಿಷಯದಲ್ಲಿ ಹಸ್ತಕ್ಷೇಪ ಮಾಡಬಹುದೇ ಎಂದು ಕೇಳುತ್ತೇನೆ. ಒಂದು ಮಾತನ್ನು ಈ ಸಮಯದಲ್ಲಿ ಸ್ಪಷ್ಟೀಕರಣಮಾಡುತ್ತೇನೆ, ಏನೆಂದರೆ, ಯಾವುದೇ ಒಂದು ಚುನಾವಣೆಯಲ್ಲಿ ಸರ್ಕಾರ ನಡೆಸತಕ್ಕಂಥ ಮಂತ್ರಿಗಳು ಹಸ್ತಕ್ಷೇಪ ಮಾಡಿದಾಗ, ಆ ಚುನಾವಣೆ ನ್ಯಾಯವಾಗಿ ನಡೆಯುವುದಕ್ಕಾಗುತ್ತದೆಯೇ ಎಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಚುನಾವಣೆ ವಿಷಯದಲ್ಲಿ ಆ ರೀತಿ ಮಾಡಬೇಕು ಈ ರೀತಿ ಮಾಡಬೇಕು ಎಂದು ತಿಳಿಸಿ ಒಂದ ಮೇಲೆ, ಅವರ ಪಕ್ಷದ ಸದಸ್ಯರುಗಳು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮತ್ತು ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ಮಂತ್ರಿಗಳು ಹೇಳಿರುವುದರಿಂದ ತಾವು ತಾಲ್ಲೂಕ್ ಅಭಿವೃದ್ಧಿ ಮಂಡಲಿಯಲ್ಲಿ ಚುನಾವಣೆ ವಿಷಯದಲ್ಲಿ ಏನು ತೀರ್ಮಾನ ತೆಗೆದುಕೊಳ್ಳಲಾಗಿದೆಯೋ ಅದನ್ನು ಮತ್ತೊಮ್ಮೆ ಪರಿಶೀಲನೆ ಮಾಡುವುದು ಒಳ್ಳೆಯದು ಎಂದು ಒತ್ತಾಯ ಮಾಡಿದ್ದಾರೆಂದು ತಿಳಿದುಬಂದಿದೆ. ಈ ಒಂದು ಪರಿಸ್ಥಿತಿ ನಮ್ಮ ತಾಲ್ಲೂಕ್‌ನಲ್ಲಿ ಒದಗಿದೆ. ಈ ಸರ್ಕಾರವನ್ನು ನಡೆಸತಕ್ಕ ಮಂತ್ರಿಗಳು ಕಾನೂನು ಪ್ರಕಾರ ಕೆಲಸ ಮಾಡತ್ಕಕ್ಕಂಥ ಅಧಿಕಾರಿಗಳ ಮೇಲೆ ಲಗಾಮು ಹಾಕಿದರೆ ಅದರಿಂದ ನಮ್ಮ ಕ್ಷೇತ್ರಕ್ಕೆ ಎಷ್ಟು ದಕ್ಕೆಯಾಗುತ್ತದೆ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ.

ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ನಮ್ಮ ತಾಲ್ಲೂಕಿಗೆ ಪ್ರವಾಸ ಬಂದ್ದಾಗ ನಾನು ಆ ಸ್ಥಳದ ಎಂ.ಎಲ್.ಎ. ಆಗಿ ಅವರನ್ನು ಸ್ವಾಗತಿಸಲು ಹೋಗಿದ್ದೆ. ಮಾನ್ಯ ಮಂತ್ರಿಗಳ ಜೊತೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಇನ್ನೂ ಹಲವಾರು ಜನ ಇದ್ದರು. ಆಗ ಶ್ರೀಮಾನ್ ಹುಚ್ಚಮಾಸ್ತಿಗೌಡರು ನನ್ನನ್ನು ನೋಡಿದರು. ನಾನು ಆ ಸ್ಥಳದ ವಿಧಾನ ಸಭೆಯ ಸದಸ್ಯ ಎಂಬುದು ಅವರಿಗೆ ಗೊತ್ತು. ಹೀಗಿದ್ದರೂ ಅವರು ನನಗೆ ಸನ್ಮಾನ ಕೊಡದೆ ಮರ್ಯಾದೆ ಕೊಡದೆ ಅವರ ಎದುರಿಗೆ ನಿಂತಿದ್ದ ಯಾರೋ ಒಬ್ಬರೂ ಆಡಳಿತ ಕಾಂಗ್ರಸ್ಸಿನವರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಮುಂದಕ್ಕೆ ಹೋದರು. ಅಷ್ಟು ಜನಗಳ ಎದುರಿನಲ್ಲಿ ಆ ಕ್ಷೇತ್ರದ ವಿಧಾನ ಸಭೆಯ ಸದಸ್ಯನಾದ ನನ್ನನ್ನು ಅವರು ಸರಿಯಾಗಿ ಮಾತನಾಡಿಸಿ ಗೌರವ ಕೊಡದೆ ತಮ್ಮ ಜೊತೆಯಲ್ಲಿ ಬೇರೆ ಯಾರೋ ಒಬ್ಬರು ಆಡಳಿತ ಕಾಂಗ್ರೆಸ್ಸಿನವರನ್ನು ಕರೆದುಕೊಂಡು ಹೋದರೆ ಆ ಸ್ಥಳದ ಎಂ.ಎಲ್.ಎ.ಯ ಕಮ್ಮಿತ್ತು ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಿ ? ಅಷ್ಟೊಂದು ಜನಗಳ ಎದುರಿನಲ್ಲಿ ಆ ಸ್ಥಳದ ಎಂ.ಎಲ್.ಎ. ಆದ ನನಗೆ ಅವರು ಒಂದು ಚೂರು ಬೆಲೆಯನ್ನು ಕೊಡದೆ ಹೋದರೆ ಆ ತಾಲ್ಲೂಕಿನ ಜನಗಳಿಗೆ ನನ್ನ ಬೆಲೆ ಎಷ್ಟರ ಮಟ್ಟಿಗೆ ಇರುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಿರಿ. ಇದನ್ನು ನ್ಯಾಯರೀತಿಯಿಂದ ವಿವರ್ಶೆ

(ಶ್ರೀ ಟಿ. ಎಂ. ಮಂಜುನಾಥ)

ಮಾಡಿ ನೋಡಿ. ಇಂಥಾ ಬಂದು ಕೆಲಸವನ್ನು ಹಿರಿಯರಾವ ಶ್ರೀಮಾನ್ ಹುಚ್ಚಮಾಸ್ತಿಗೌಡರು ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿರಲ್ಲಿಲ್ಲ. ನಾನು ಅವರನ್ನು ಆಗಸ್ಟ್ ೧೫ನೆ ತಾರೀಖಿನ ದಿವಸ ಅಭಿಮಾನದಿಂದ ನಮ್ಮ ತಿಪಟೂರು ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ ಅವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡಬೇಕೆಂಬ ನಿರ್ಧಾರ ಮಾಡಿದ್ದೆ. ಅದರಲ್ಲಿ ನಮಗೇನೂ ರಾಜಕೀಯವಿಲ್ಲ. ನಮ್ಮ ಕ್ಷೇತ್ರಕ್ಕೆ ಯಾವ ಮಂತ್ರಿಗಳೇ ಬರಲಿ ಆಗ ನಾವು ಅವರಿಗೆ ಭವ್ಯಸ್ವಾಗತವನ್ನು ಕೊಟ್ಟಿದ್ದೇವೆ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಆ ಸ್ಥಳದ ಎಂ.ಎಲ್.ಎ.ಗೆ ಮರ್ಯಾದೆಯನ್ನು ಕೊಡುವುದು ಅವರ ಆದ್ಯ ಕರ್ತವ್ಯ. ಹೀಗಿರುವಾಗ ಶ್ರೀಮಾನ್ ಹುಚ್ಚಮಾಸ್ತಿಗೌಡರು ನಮ್ಮ ಕ್ಷೇತ್ರಕ್ಕೆ ಪ್ರವಾಸ ಬಂದಿದ್ದಾಗ ನನಗೆ ಮರ್ಯಾದೆಯನ್ನು ಕೊಡದೆ ಜೊತೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಚುನಾವಣೆಯ ವಿಚಾರದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಇದು ಸರಿಯೆ ? ಇದು ದುರಾಡಳಿತವನ್ನು ತೋರಿಸುವುದಿಲ್ಲವೇ, ತಾವು ಸತ್ಯ ರೀತಿಯಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಚುನಾವಣೆಯನ್ನು ಮಾಡಿ ನಾವು ಅದಕ್ಕೆ ಬೇಡ ಎಂದು ಹೇಳುವುದಿಲ್ಲ. ಆದರೆ ಮಂತ್ರಿಗಳು ಪ್ರವಾಸ ಬಂದಂತಹ ಕಾಲದಲ್ಲಿ ಆ ಸ್ಥಳದ ಎಂ.ಎಲ್.ಎ.ಗೆ ಸರಿಯಾದ ಮರ್ಯಾದೆಯನ್ನು ಕೊಡದಿದ್ದರೆ ಹೇಗೆ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಆದಕ್ಕೋಸ್ಕರ ಇನ್ನು ಮುಂದಾದರೂ ಮಂತ್ರಿಗಳು ನಮ್ಮ ತಿಪಟೂರು ಕ್ಷೇತ್ರಕ್ಕೆ ಪ್ರವಾಸ ಬಂದಾಗ ನಮ್ಮ ವಿಚಾರದಲ್ಲಿ ಒಂದು ಕೆಟ್ಟ ಅಭಿಪ್ರಾಯ ಬಾರದ ಹಾಗೆ ನಮಗೆ ಸರಿಯಾದ ಮರ್ಯಾದೆಯನ್ನು ಕೊಡಬೇಕು, ಇನ್ನು ಮುಂದೆ ಇಂಥಾ ಪ್ರಸಂಗ ಬಾರದ ಹಾಗೆ ನಡೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಶ್ರೀಮಾನ್ ಹುಚ್ಚಮಾಸ್ತಿಗೌಡರ ಮೇಲೆ ನಾನು ದೋಷಾರೋಪಣೆ ಮಾಡುತ್ತಿಲ್ಲ. ಅವರು ವಯಸ್ಸಿನಲ್ಲಿ ನನಗಿಂತ ದೊಡ್ಡವರು ಹಾಗೂ ಅನುಭವಿಗಳು. ಅವರು ಯಾರೋ ತಮ್ಮ ಪಕ್ಷದವರ ಮಾತನ್ನು ಕೇಳಿ ಅವರು ಈ ರೀತಿ ಮಾಡಿದ್ದಾರೆ. ಅವರು ನನ್ನ ವಿಚಾರದಲ್ಲಿ ತಪ್ಪು ಅಭಿಪ್ರಾಯವನ್ನು ತಿಳಿದುಕೊಳ್ಳಬಾರದು. ನಾನು ನಡೆದಂತಹ ಸತ್ಯ ಸಂಗತಿಯನ್ನು ಹೇಳಿದ್ದೇನೆ. ನಾನು ಸತ್ಯಕ್ಕೆ ದೂರವಾದ ವಿಷಯವನ್ನು ಹೇಳಿಲ್ಲ. ಅವರು ಬುದ್ಧಿವಂತರು ಅನುಭವಿಗಳು ಆಗಿ ಈ ರೀತಿ ನಡೆದುಕೊಳ್ಳಬಾರದು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ :—ಮಾನ್ಯ ಅಧ್ಯಕ್ಷರೇ ಈಗತಾನೆ ತಿಪಟೂರು ಕ್ಷೇತ್ರದ ಮಾನ್ಯ ಸದಸ್ಯರು ಅಲ್ಲಿ ನಡೆಯದೇ ಇರತಕ್ಕ ಕೆಲವ ವಿಚಾರಗಳನ್ನು ಹೇಳಿದರು. ಅವರು ಈ ತರಹ ಹೇಳುವುದರಿಂದ ಪರಿಸ್ಥಿತಿ ಉತ್ತಮವಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಆ ಕ್ಷೇತ್ರಕ್ಕೆ ಯಾವುದೋ ಒಂದು ಊರಿಗೆ ವಿದ್ಯುಚ್ಛಕ್ತಿ ಪ್ರವೇಶೋತ್ಸವಕ್ಕೆ ಹೋಗಿದ್ದೆ. ಅಲ್ಲಿ ಸಮಾರಂಭ ಮುಗಿಯುವುದು ಸ್ವಲ್ಪ ತಡವಾಯಿತು. ಮಾನ್ಯ ಸದಸ್ಯರು ಅಲ್ಲಿ ಇರಲ್ಲಿಲ್ಲ. ನಾನು ವಿದ್ಯುಚ್ಛಕ್ತಿ ಪ್ರವೇಶೋತ್ಸವವನ್ನು ಮುಗಿಸಿಕೊಂಡು ವಾಪಸ್ಸು ತಿಪಟೂರಿಗೆ ಬರುವಾಗ ಬಹಳ ಹೊತ್ತು ಆಗಿತ್ತು. ನಾನು ಅಲ್ಲಿಗೆ ಬಂದಾಗ ಬಹಳ ಹೊತ್ತು ಆಗಿತ್ತು ನಾನು ಅಲ್ಲಿಗೆ ಬಂದಾಗ ಅಲ್ಲಿ ಕೆಲವು ಹಿರಿಯ ಅಧಿಕಾರಿಗಳು ಮತ್ತು ಕೆಲವು ಸ್ನೇಹಿತರು ಇದ್ದರು. ಆಡತ ಮಾನ್ಯ ಸದಸ್ಯರು ಕೆಲವು ಅಧಿಕಾರಿಗಳನ್ನು ಕರೆಸಿಕೊಂಡು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಚುನಾವಣೆಯ ವಿಷಯವನ್ನು ಮಾತನಾಡಿದರು ಎಂದು ಹೇಳಿದ್ದು ಸತ್ಯಕ್ಕೆ ದೂರವಾದ ಮಾತು, ಹೀಗೆ ನಡೆಯದೇ ಇರತಕ್ಕ ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಿರಬಾರದು. ಆದರ ಜೊತೆಗೆ ಅಲ್ಲಿಗೆ ಇನ್ನೊಂದು ಸಾರಿ ಅಲ್ಲಿಗೆ ಪ್ರವಾಸ ಹೋದಾಗ ಯಾವುದೋ ಒಂದು ದೇವಸ್ಥಾನಕ್ಕೆ ಹೋಗಬೇಕಾದ ಸಂದರ್ಭ ಬಂತು. ಆದು ಮೊದಲು ಪ್ರೋಗ್ರಾಮಿನಲ್ಲಿ ಇರಲಿಲ್ಲ. ಆ ದೇವಸ್ಥಾನ ನೋಡಬೇಕಾದದ್ದು ಮತ್ತು ಬಹಳ ದೊಡ್ಡ ದೇವಸ್ಥಾನ, ಅಲ್ಲಿಗೆ ಹೋಗಬೇಕು ಎಂದು ಹಿಂದೆ ಆ ಕ್ಷೇತ್ರದಲ್ಲಿ ಎಂ.ಎಲ್.ಎ ಆಗಿದ್ದ ನಮ್ಮ ಪಕ್ಷದ ಸದಸ್ಯರು ತಿಳಿಸಿದರು. ಆದ್ದರಿಂದ ನಾನು ಅಲ್ಲಿಗೆ ಹೋಗಬೇಕಾಯಿತು. ನಾನು ಮಾನ್ಯ ಸದಸ್ಯರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದಕ್ಕೆ ಅವರನ್ನು ನಾನು ಬೇಡ ಎಂದು ಹೇಳಿಲ್ಲ. ಅವರು ಆ ಸ್ಥಳದಲ್ಲಿದ್ದವರು ತಮ್ಮಷ್ಟಕ್ಕೆ ತಾವು ಎದ್ದು ಹೊರಟು ಹೋದರೆ ಅದಕ್ಕೆ ನಾನು ಜವಾಬ್ದಾರನಲ್ಲ. ಅಲ್ಲಿ ನಮ್ಮ ಪಕ್ಷದ ಸದಸ್ಯರಿಗೆ ಗೌರವವನ್ನು ಕೊಟ್ಟರು ಎಂದು ಹೇಳಿದರು. ಅದಕ್ಕೆ ನಾನು ಹಿಂಜರಿಯುವುದಿಲ್ಲ, ನಮ್ಮ ಪಕ್ಷದ ತಾಲ್ಲೂಕಿನ ಸದಸ್ಯರಾದರೂ ಕೂಡ ಅವರನ್ನು ಬೆನ್ನುತಟ್ಟಿ ಬೆಳಸಬೇಕು. ಸರ್ಕಾರಿ ದುಡ್ಡಿನಲ್ಲಿ ಪ್ರವಾಸ ಹೋದರೂ ಕೂಡ ನಾವು ನಮ್ಮ ಪಕ್ಷದ ಸದಸ್ಯರಿಗೆ ಬರಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಬಂದೇ ಬರುತ್ತಾರೆ ಅವರಿಗೂ ನಾವು ಗೌರವ ಕೊಡುತ್ತೇವೆ ಆ ಕ್ಷೇತ್ರದ ಶಾಸನಸಭಾ ಸದಸ್ಯರಿಗೆ ಎಷ್ಟರ ಮಟ್ಟಿನ ಗೌರವವನ್ನು ಕೊಡಬೇಕೋ ಅಷ್ಟರಮಟ್ಟಿನ ಗೌರವ ಕೊಡುತ್ತೇವೆ. ಅವರಿಗೆ ನಮ್ಮ ಪ್ರವಾಸದ ಕಾರ್ಯಕ್ರಮ ಪಟ್ಟಿಯನ್ನು ತಿಳಿಸುತ್ತೇವೆ. ನಾವು ಪ್ರವಾಸ ಹೋದಂತಹ ಕಾಲದಲ್ಲಿ ಯಾರೇ ಅಲ್ಲಿಗೆ ಬಂದರೂ ಕೂಡ ನಾವು ಅವರನ್ನು ಅಲ್ಲಿಗೆ ಬರಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ನಮಗೂ

ಪಕ್ಷದ ಸದಸ್ಯರು ಹಿಂದೆ ಆ ಕ್ಷೇತ್ರದಲ್ಲಿ ಎಂ ಎಲ್.ಎ. ಆಗಿದ್ದವರು ನಮ್ಮ ಜೊತೆಯಲ್ಲಿ ಬಂದು ಕುಳಿತು ಕೊಂಡರೆ ಅದನ್ನು ಈ ಮಾನ್ಯ ಸಭೆಯ ಸದಸ್ಯರು ಸಹಿಸದಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ ? ಅಷ್ಟೇ ಅಲ್ಲ ಅವರು ಇಲ್ಲದೇ ಇರತಕ್ಕ ವಿಷಯಗಳನ್ನು ಈ ಸಭೆಯಲ್ಲಿ ಹೇಳಿದ್ದಾರೆ. ಇದರ ಜೊತೆಗೆ ಮಾನ್ಯ ಸದಸ್ಯರಿಗೆ ಆಸಕ್ತಿ ಇರತಕ್ಕಂಥಾ ಇನ್ನೊಂದು ದೇವಸ್ಥಾನದಲ್ಲಿ ನಡೆದಂತಹ ಅಕ್ರಮಗಳ ಬಗ್ಗೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದನ್ನು ಸ್ವಲ್ಪ ಮನಸ್ಸಿನಲ್ಲಿಟ್ಟುಕೊಂಡು ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದರು. ಅದು ಸರಿಯಲ್ಲ,

ಶ್ರೀ ಟಿ. ಎಂ. ಮಂಜುನಾಥ್ :—ಮಾನ್ಯ ಮಂತ್ರಿಗಳು ನಾನು ಸತ್ಯಕ್ಕೆ ದೂರವಾದ ಅಪಾದನೆಗಳನ್ನು ಮಾಡಿದ್ದೇನೆ ಎಂದು ಹೇಳಿದರು. ಇವತ್ತಿನ ದಿವಸ ನಾನು ಒಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿ ಅವರು ಅಧಿಕಾರವನ್ನು ಸ್ವೀಕಾರ ಮಾಡಿದ್ದಾರೆ. ನಾನು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿದ್ದರೆ ನಾನು ರಾಜಿನಾಮೆಯನ್ನು ಕೊಡುತ್ತೇನೆ. ಇಲ್ಲದೆಹೋದರೆ ಅವರು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿದ್ದರೆ ಅವರು ತಮ್ಮ ಪದವಿಗೆ ರಾಜಿನಾಮೆಯನ್ನು ಕೊಡಲಿ. ಬೇಕಾದರೆ ವಿಚಾರಣೆ ಮಾಡಲಿ ನಾನು ಹೇಳುತ್ತೇನೆ ಸತ್ಯಕ್ಕೆ ದೂರವಾದ ಮಾತನ್ನು ನಾನು ಎಂದಿಗೂ ಆಡುವುದಿಲ್ಲ. ಹಿರಿಯರೂ ಅನುಭವಿಗಳೂ ಆದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿದ್ದಾರೆ. ಇಂಥಾ ಸಂದರ್ಭದಲ್ಲಿ ವಿಚಾರಣೆ ಮಾಡಿ ಯಾರು ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿದ್ದಾರೆ ಮತ್ತು ತಪ್ಪು ಮಾಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮತೆಗೆದುಕೊಳ್ಳಬೇಕು. ಒಂದು ಜವಾಬ್ದಾರಿಯ ಸ್ಥಾನದಲ್ಲಿರತಕ್ಕವರು ಈ ರೀತಿ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುತ್ತಾ ಏನೂ ತಿಳಿಯದವರ ಹಾಗೆ ನಟನೆ ಮಾಡುವುದು ಶೋಚನೀಯವಾದ ವಿಷಯ.

ಶ್ರೀ ಜಿ. ವೆಂಕಟಪ್ಪ :—ಸ್ವಾಮಿ ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರು ಯಾವುದೋ ಒಂದು ವಿಚಾರವನ್ನು ಅಧ್ಯಕ್ಷರ ಮುಖಾಂತರ ಯಾವುದೋ ಒಂದು ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಅವರು ಅದಕ್ಕೆ ತಮ್ಮ ಎಕ್ಸ್‌ಪ್ಲನೇಷನ್ ಕೊಟ್ಟನಂತರವೂ ಯಾವುದೋ ವಿಚಾರಗಳನ್ನು ಪ್ರಾತಿನಾಡುತ್ತಾ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅಡ್ಡಿಯನ್ನುಂಟು ಮಾಡುತ್ತಿರುವುದು ಸರಿಯೇ ?

MR DEPUTY SPEAKER :—The Hon'ble Member has raised a point of order that something was raised by way of protest by one Hon'ble Member and the Hon'ble Minister for Revenue has given his own version according to himself. Hon'ble Members have got a right to have their own versions. The Hon'ble Member is now saying that he is strongly protesting. It is his right. I hold that each Hon'ble Member has his own way of looking at things and hold his own opinion.

So far as the point of order is concerned, it would not be good to protest in very harsh offensive and insulting manner. To that extent the protest has not encroached or transgressed the limits. Therefore, though there is force in the point of order raised by the Hon'ble Member Sri Venkatappa, I feel that the limits has not been transgressed.

Proposed Distribution of sities on 15th August 1972.

SRI T. R. SHAMANNA (FORT).—Sir, four co-legislators and I have given notice regarding the question of allotment of sites proposed to be made by the 15th August by the Hon'ble Minister for Municipal Administration. It is a matter of serious consequence since lakhs of sites are stated to be distributed. Legislators should be consulted in